ತೆಗೆದುಕೊಂಡ ನಿರ್ಧಾರದಂತೆ ಆತ ಕೆಲಸ ಮಾಡಿದ್ದ. ತನ್ನ ಸ್ವಂತ ವಸ್ತುವನ್ನು ಬಿಸಾಡುವ ಹಕ್ಕು ಅವನಿಗೆ ಖಂಡಿತವಾಗಿ ಇತ್ತು. ಈ ಯೋಚನೆ ಅವನಲ್ಲಿ ಆ ವಾದ್ಯದ ಬಗ್ಗೆ ಇದ್ದ ಮೋಹವನ್ನು ಪುನಃ ಹೆಚ್ಚಿಸಿತು. ತೀರಿಕೊಂಡ ಗೆಳೆಯನ ಹಣೆಯ ಮೇಲೆ ಕೈ ಇಡುವಂತೆ ಅವನು ಪಿಯಾನೊದ ಮೇಲೆ ತನ್ನ ಕೈ ಇಟ್ಟು ತೀರ ವಿಚಲಿತನಾಗಿ ಅದರ ಇತಿಹಾಸ ಹೇಳಲು ತೊಡಗಿದ:

'ಇದೊಂದು ಪುರಾತನ ಪಿಯಾನೊ. ಇಡಿಯ ಬ್ರೆಜಿಲ್‌ನಲ್ಲೇ ಅತ್ಯಂತ ಹಳೆಯದು. ಇದು ರಾಜಸೇವೆ ಮಾಡಿದ್ದ ನನ್ನ ತಾತಂದಿರಿಗೆ ಸೇರಿದ್ದು. ನಂಬಿದರೆ ನಂಬಿ, ಈ ಪಿಯಾನೊ ಬಹಳ ಉತ್ಕೃಷ್ಟವಾಗಿತ್ತು. ಜನಪ್ರಿಯ ವಾದಕರು ಇದನ್ನು ನುಡಿಸಿದ್ದಾರೆ. ಉಳಿದೆಲ್ಲ ಪಿಯಾನೊಗಳಿಗಿಂತ ಇದನ್ನೇ ಶಾಪಿನ್ ಮೆಚ್ಚಿದ್ದ ಎಂದು ಹೇಳುತ್ತಾರೆ. ಆದರೆ, ಏನಾಯಿತು? ಈಗ ಯಾರಿಗೂ ಅದು ಬೇಡವಾಗಿದೆ. ಸಮಯ ಬದಲಾಗಿದೆ... ನನ್ನ ಮಗಳು ಸಾರಾ ಮದುವೆಯಾಗುವುದರಲ್ಲಿದ್ದಾಳೆ. ಆಕೆ ನಮ್ಮ ಜೊತೆಯೇ ಬಾಳುವೆ ಮಾಡುವವಳು. ಮನೆ ಸಣ್ಣದು. ನಾನೇನು ಮಾಡಲಿ? ಯಾರಿಗೂ ಬೇಡ. ಇದೊಂದೇ ದಾರಿ.' ಅವನು ಸಮುದ್ರದ ಕಡೆಗೆ ಬೆಟ್ಟು ತೋರಿಸಿದ.

ಅವರು ಅಡ್ಡಿ ಮಾಡಿದುದರಿಂದ ನೀಗ್ರೋ ಹುಡುಗರು ತಾಳ್ಮೆ ಕಳೆದುಕೊಳ್ಳತೊಡಗಿದರು. ಸಮುದ್ರದ ಅಲೆಗಳಲ್ಲಿ ಆ ಪಿಯಾನೊ ಮುಳುಗಿ ಹೋಗುವುದನ್ನು ನೋಡಲು ಅವರು ಕಾತರರಾಗಿದ್ದರು. ಅವರಷ್ಟೇ ಅಲ್ಲ, ಮೆರವಣಿಗೆಗೆ ಬಂದು ಸೇರಿದವರು, ಮನೆಗೆ ಸಾಮಾನು ತಂದು ಕೊಡುವವರು, ಅಂಚೆಯ ಹುಡುಗರು, ಕೆಲವು ಹೆಣ್ಣುಮಕ್ಕಳು, ಮತ್ತು ದೊಡ್ಡ ಸಂಖ್ಯೆಯಲ್ಲಿ ಸೇರಿದ ಮಕ್ಕಳೂ ಕಾತರರಾಗಿದ್ದರು.

ಪೊಲೀಸರು ಪಿಯಾನೊದ ಒಳಗೆಲ್ಲ ಪರೀಕ್ಷಿಸಿ, ಯಾವುದೇ ಸಂಶಯಾಸ್ಪದ ವಸ್ತುಗಳಿಲ್ಲವೆಂದು ಖಾತರಿ ಮಾಡಿಕೊಂಡರು. ಒಲಿವ್ಹೆರಾನ ಕಾಗದಪತ್ರಗಳನ್ನೆಲ್ಲ ಮರಳಿಸಿ, ವಾಹನ ಸಂಚಾರದ ದಟ್ಟಣೆಯಾಗದಂತೆ ಬೇಗ ಸಾಗಿಸಿ ಎಂದು ಸೂಚನೆ ಕೊಟ್ಟರು. ಫೋಟೊಗ್ರಾಫರ್ ಒಬ್ಬ ಅಲ್ಲಿದ್ದ ಕೆಲವರನ್ನು ಒಟ್ಟಿಗೆ ನಿಲ್ಲಿಸಿ ಒಂದು ಫೋಟೊ ತೆಗೆದ. ಪಿಯಾನೊದ ಎಡಭಾಗದಲ್ಲಿ ವಿಷಾದ ತುಂಬಿದ ಮುಖದಿಂದ ಯಾವ್ಹೊ ದೆ ಒಲಿವ್ಹೆರಾ ನಿಂತಿದ್ದ. ಆ ಮೇಲೆ ಪಿಯಾನೊದ ಅಂತಿಮ ಕ್ಷಣ ಇಂಥ ಅಡ್ಡಿ ಆತಂಕಗಳಿಂದ ದೀರ್ಘವಾಗುವುದನ್ನು ನೆನೆಸಿ ಕೆಂಡಾಮಂಡಲನಾದ.

ಅಷ್ಟರಲ್ಲಿಯೇ ಕತ್ತಲಾಯಿತು. ಆರು ಗಂಟೆಯ ನಂತರ ಯಾತ್ರೆ ಮುಂದುವರಿಯಲು ಅನುಮತಿ ಕೊಡಲು ಸಾಧ್ಯವಿಲ್ಲ ಎಂದು ಒಬ್ಬ ಪೋಲಿಸ್ ಹೇಳಿದ. ಆದುದರಿಂದ ಅವರು ಹಳೆಯ ಪಿಯಾನೊವನ್ನು ಅಲ್ಲಿಯೇ ಬಿಟ್ಟು ಮರುದಿನ ಬೆಳಗಿನ ತನಕ ಕಾಯುವುದು ಅನಿವಾರ್ಯವಾಯಿತು.

ನೀಗ್ರೋ ಹುಡುಗರೆಲ್ಲ ಚದುರಿದರು. ಅವರ ಕೂಲಿಯನ್ನು ಒಲಿವ್ಹೆರಾ ಎಲ್ಲ ಮುಗಿದ ಮೇಲೆ ಮನೆಯಲ್ಲಿ ಕೊಡುವವನಿದ್ದ. ಅವರೆಲ್ಲ ದಂತದ ಹೊದಿಕೆಗಳುಳ್ಳ ಸಣ್ಣ ಸಣ್ಣ ಕೀಲಿಗಳನ್ನು ಹಿಡಿದುಕೊಂಡು ಊರೆಲ್ಲ ಅಡ್ಡಾಡತೊಡಗಿದರು.

ಪಿಯಾನೊ ರಸ್ತೆಯ ಬದಿಯಲ್ಲೇ ಅನಾಥನಂತೆ ತಲೆಕೆಳಗಾಗಿ ರಾತ್ರಿಯೆಲ್ಲ ಬಿದ್ದಿತ್ತು. ಅದೊಂದು ಹಾಸ್ಯಾಸ್ಪದ ನೋಟ. ಸಂಜೆ ವಾಯುವಿಹಾರಕ್ಕೆಂದು ತರುಣ ತರುಣಿಯರು ಅದರ ಸುತ್ತ ನಿಂತು ತರಹೇವಾರಿ ಮಾತುಗಳನ್ನಾಡಿದರು.

ಯಾವ್ಹೊ ದೆ ಒಲಿವ್ಹೆರಾ ಮನೆಗೆ ಹಿಂದಿರುಗಿದಾಗ ಸಾರಾಳ ಗೆಳತಿಯರು ಉತ್ಸುಕತೆಯಿಂದ ಪಿಯಾನೊ ಬಗ್ಗೆ ಪ್ರಶ್ನಿಸುತ್ತಿದ್ದುದನ್ನು ನೋಡಿದ. ರಾತ್ರಿ ಮಳೆಯ ಸದ್ದು ಕೇಳಿ ಯಾವ್ಹೊ ಮತ್ತವನ ಹೆಂಡತಿ ಎಚ್ಚರಗೊಂಡರು. ಗಾಳಿ, ಮಳೆ ಮತ್ತು ಸಮುದ್ರದ ಅಲೆಗಳು ದಡಕ್ಕೆ ಅಪ್ಪಳಿಸುವ ಸದ್ದು. ಅವರು ದೀಪ ಉರಿಸಿ ಪರಸ್ಪರ ಮುಖ ನೋಡಿದರು. ರೊಸಾಲಿಯ, ನಾನು ಪಿಯಾನೊ ಬಗ್ಗೆಯೇ ಯೋಚಿಸುತ್ತಿದ್ದೆವು.

ನಾನೂ ಸಹ, 'ಯಾವ್ಹೊ. ಪಾಪ! ಈ ಮಳೆಯಲ್ಲಿ ಅಲ್ಲಿ.... ಅಲ್ಲದೇ ಎಷ್ಟೊಂದು ಚಳಿ!'

'ಅದರೊಳಗೆ ನೀರು ತುಂಬಿ ಆ ಕೀಲಿಗಳು, ಆ ಮಣೆಗಳು ಎಲ್ಲ ಹಾಳಾಗುತ್ತಿವೆ. ಭೀಕರ, ಅಲ್ಲವೇ ರೊಸಾಲಿಯ?'

'ನಾವದಕ್ಕೆ ಅಪಚಾರ ಮಾಡಿದೆವು, ಯಾವ್ಹೊ.'

'ಅದರ ಬಗ್ಗೆ ಯೋಚಿಸಲೇ ಬಾರದೆಂದಿದ್ದೇನೆ, ರೊಸಾಲಿಯ.'

ಯಾವ್ಹೊ ದೆ ಒಲಿವ್ಹೆರಾ ಕಿಟಕಿಯ ಮೂಲಕ